# ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ
ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,

**ಸಿ.ಸಿ. ನಂಃ 583/2020**

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ
ಪೊಲೀಸ್ ಠಾಣೆ

// ವಿರುದ್ದ //

ಆರೋಪಿತರು ಃ ಸರಸ್ವತಿ ಮತ್ತು ಇತರರು.

## ದೋಷಾರೋಪಣೆ

**ಆರೋಪಿತರುಃ**

1. ಸರಸ್ವತಿ ಗಂಡ ಭೀಮರಾಯ,
   ವಃ 32 ವರ್ಷ,
2. ಭೀಮರಾಯ ತಂದೆ ಮಲ್ಲಪ್ಪ,
   ವಃ 32 ವರ್ಷ,
3. ಆಕಾಶ ತಂದೆ ಸಿದ್ದಪ್ಪ,
   ವಃ 22 ವರ್ಷ,
4. ತಾಯಮ್ಮ ಗಂಡ ಸಿದ್ದಪ್ಪ,
   ವಃ 40 ವರ್ಷ,
5. ಸಿದ್ದಪ್ಪ ತಂದೆ ಭೀಮಶರ್ಪ್ಪ,
   ವಃ 32 ವರ್ಷ,
6. ಸಣ್ಣ ತಾಯಪ್ಪ ತಂದೆ ಮಲ್ಲಪ್ಪ,
   ವಃ 38 ವರ್ಷ,
7. ಸಂಗೀತಾ ಗಂಡ ತಾಯಪ್ಪ,
   ವಃ 30 ವರ್ಷ,
8. ಮಲ್ಲಪ್ಪ ತಂದೆ ಹನುಮಯ್ಯ,

ವಃ 65 ವರ್ಷ,

9. ಹಣಮಂತ ತಂದೆ ಮಲ್ಲಪ್ಪ,
ವಃ 29 ವರ್ಷ,

10. ನಾಗಮ್ಮ ಗಂಡ ಹಣಮಂತ,
ವಃ 40 ವರ್ಷ,

11. ರಂಗಮ್ಮ ಗಂಡ ಭೀಮಶಪ್ಪ,
ವಃ 60 ವರ್ಷ,

12. ದೊಡ್ಡ ತಾಯಪ್ಪ ತಂದೆ ಭೀಮಶೆಪ್ಪ,
ವಃ 35 ವರ್ಷ,

ಎಲ್ಲಾರು ಸಾಃ ಹತ್ತಿಕುಣಿ ರಾಮುನಾಯಕ ತಾಂಡಾ, ತಾಃ ಮತ್ತು ಜಿಃ ಯಾದಗರಿ.

**ಆರೋಪಿತರಾದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ದಿನಾಂಕ 20.09.2020 ರಂದು ಸಾಃ 7-00 ಗಂಟೆ ಸುಮಾರಿಗೆ ಸೈದಾಪೂರ ಪೋಲಿಸ್ ಠಾಣೆ ಸರಹದ್ದಿಲ್ಲಿ ಬರುವ ವಂಕಸಂಬ್ರ ಗ್ರಾಮದ ಚಾಸಾಃ 1,4,5,6 ಮತ್ತು 7 ರವರು ತಮ್ಮ ಮನೆಯ ಮುಂದೆ ಇರುವಾಗ ಆರೋಪಿತರೆಲ್ಲರೂ ಅಕ್ರಮಕೂಟ ರಚಿಸಿಕೊಂಡು ಹೋಗಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.143 ಸಹ ಕಲಂ. 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**2.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ದೊಂಬಿ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಹೋಗಿ ದೊಂಬಿ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.147 ಸಹ ಕಲಂ. 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ 1ನೇ ಆರೋಪಿಯಾದ ನೀನು ಚಾಸಾಃ1 ನೇದ್ದವರ ಕೈಯಿಂದ ಕೂದಲು ಹಿಡಿದು ಎಳೆದಾಡಿ ಬೆನ್ನಿಗೆ ಗುದ್ದಿದ್ದು, 2ನೇ ಆರೋಪಿಯಾದ ನೀನು ಚಾಸಾಃ5 ನೇದವರು ಜಗಳದಲ್ಲಿ ಅಡ್ಡ ಹೋದಾಗ ಚಾಸಾಃ5 ರವರ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿದ್ದು, ಸ್ವ ಇಚ್ಛೆಯಿಂದ ಗುಪ್ತ ಗಾಯ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**4.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ, 3ನೇ ಆರೋಪಿಯಾದ ನೀನು ಚಾಸಾಃ6 ರವರು ಜಗಳದಲ್ಲಿ ಅಡ್ಡ ಹೋದಾಗ ಅವರ ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.354 ಸಹ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**5.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಆರೋಪಿತರಾದ ನೀವು ಚಾಸಾಃ4 ರಿಂದ 6 ರವರಿಗೆ ಲೆ ರಂಡಿ ಸೂಳಿ ಮಕ್ಕಳೆ ರಾ ಎಫ ಆಯ್ ಆರ್ ಮಾಡಿಸಿ ಬಂದಿವಿ ನೋಡಿರಿಲೇ ಎನ್ ಮಾಡುತ್ತಿರಿ ಮಾಡ ಬರ್ರ ಲಂಗಾ ಸೂಳೆ ಮಕ್ಕಳೆ ಅಂತಾ ಅವಾಚ್ಯ ಶಬ್ದದಿಂದ ಬೈದು, 4 ಮತ್ತು 5ನೇ ಆರೋಪಿತರಾದ ನೀವು ಚಾಸಾಃ6 ರವರಿಗೆ ಎಲೇ ಸೂಳೆ ನೀನು ಎದ್ದ ಬಂದ ಸೂಳೆ ಇದ್ದಿ ರಂಡಿ, ಬಸವಿ ಅಂತಾ ಅವಾಚ್ಯ ಶಬ್ದದಿಂದ ಬೈದು, ಚಾಸಾಃ4 ರವರು ಜಗಳದಲ್ಲಿ ಅಡ್ಡ ಹೋದಾಗ 8 ಮತ್ತು 9ನೇ ಆರೋಪಿತರಾದ ನೀವು ಚಾಸಾಃ4 ರವರಿಗೆ ಲೇ ರಂಡಿ ಸೂಳೆ ಮಗನೆ ನಿಮ್ಮ ವಂಶವನ್ನು ನಿರ್ವವಂಶವನ್ನಾಗಿ ಮಾಡುತ್ತೇವೆ ನೀವು ಏಡಿ ಸೂಳೆ ಮಕ್ಕಳು ಇದ್ದೀರಿ ಅಂತಾ

ಅವಾಚ್ಯ ಶಬ್ದದಿಂದ ಬೈದು, 10 ರಿಂದ 12ನೇ ಆರೋಪಿತರಾದ ನೀವು ಚಾಸಾಃ1,4 ಮತ್ತು 6 ರವರಿಗೆ ಲೇ ರಂಡಿ ಸೂಳೆ ಮಕ್ಕಳೆ ನಿಮ್ಮದು ಊರಲ್ಲಿ ಬಹಳ ಸೊಕ್ಕು ಆಗಿದೆ ಅಂತಾ ಅವಾಚ್ಯ ಶಬ್ದದಿಂದ ಬೈದಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**6.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ 2ನೇ ಆರೋಪಿಯಾದ ನೀನು ಚಾಸಾಃ5 ನೇದ್ದವರಿಗೆ ನೀವು ಎಷ್ಟು ಜನ ಇದ್ದೀರಿ ಅಷ್ಟು ಜನರಿಗೆ ಖಲಾಸ ಮಾಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿದ್ದು, 6 ಮತ್ತು 7ನೇ ಆರೋಪಿತರಾದ ನೀವು ಚಾಸಾಃ5 ನೇದ್ದವರಿಗೆ ಸೂಳೆ ಮಗನೆ ಸುಮ್ಮನಿದ್ದರೆ ಸರಿ ಇಲ್ಲಂದರೆ ನಿನ್ನ ತೊಡ್ಡು ಇಸುಕಿ ಸಾಯಿಸುತ್ತೇನೆ ಮಗನೆ ಅಂತಾ ಜೀವದ ಬೆದರಿಕೆ ಹಾಕಿದ್ದು, 10 ರಿಂದ 12 ನೇ ಆರೋಪಿತರಾದ ನೀವು ಚಾಸಾಃ1, 4 ರಿಂದ 6 ರವರಿಗೆ ನಿಮಗೆ ಇವತ್ತು ಖಲಾಸ ಮಾಡುತ್ತೇವೆ ನೀವು ಊರಲ್ಲಿ ಹೆಂಗ ಸಂಸಾರ ಮಾಡುತ್ತೀರಿ ನೋಡುತ್ತೇವೆ ಮಕ್ಕಳೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಈ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯುವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ **29.11.2023.**
ಸ್ಥಳಃ ಯಾದಗಿರಿ

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ಯಾದಗಿರಿ.**